# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 21**
**ಮಾನ್ಯ ಸದಸ್ಯರ ಹೆಸರು : ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 12.09.2022**
**ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ (National Health Mission) ಅಡಿಯಲ್ಲಿ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು: (ವಿವರ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು/ಯೋಜನೆಗಳು ಅನುಷ್ಠಾನಗೊಳಿಸಲಾಗುತ್ತಿದೆ.<br><br>ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br><u>ಮುಖ್ಯ ಯೋಜನೆಗಳ ವಿವರ:</u><br>• ರಾಷ್ಟ್ರೀಯ ಆರೋಗ್ಯ ಅಭಿಯಾನವು ಹಲವಾರು ಯೋಜನೆ/ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಪ್ರಮುಖವಾಗಿ ಸಂತಾನೋತ್ಪತ್ತಿ, ತಾಯಿ ಆರೋಗ್ಯ, ಮಕ್ಕಳ ಆರೋಗ್ಯ, ಹದಿಹರೆಯದವರ ಆರೋಗ್ಯ, ಪೌಷ್ಠಿಕ ಆರೋಗ್ಯ, ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ, ಡಯಾಲಿಸಿಸ್ ಕಾರ್ಯಕ್ರಮ, ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳ ನಿಯಂತ್ರಣ, ಆರೋಗ್ಯ ಮತ್ತು ಕ್ಷೇಮ ಕೇಂದ್ರದಿಂದ ಒಟ್ಟು 12 ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳ ಲಭ್ಯತೆ, ಡಿಜಿಟಲ್ ಹೆಲ್ತ್ ಮೂಲಕ ಹೆಚ್.ಎಂ.ಐ.ಎಸ್ ಮತ್ತು ಟೆಲಿ-ಕನ್ಸಲ್ಟೇಷನ್ ಮೂಲಕ ವಿವಿಧ ಆರೋಗ್ಯ ಸೇವೆಗಳು/ಯೋಜನೆಗಳನ್ನು ಒದಗಿಸಲಾಗುವುದು.<br><br>• ಆರೋಗ್ಯ ಸೇವೆಗಳನ್ನು ಈ ಕೆಳಕಂಡ 3 ಹಂತಗಳಲ್ಲಿ ಒದಗಿಸಲಾಗುತ್ತಿದೆ.<br><br>1)ಪ್ರಾಥಮಿಕ ಹಂತದ ಆರೋಗ್ಯ ಸೇವೆಗಳು.<br>2)ದ್ವಿತೀಯ ಹಂತದ ಆರೋಗ್ಯ ಸೇವೆಗಳು.<br>3)ತೃತೀಯ ಹಂತದ ಆರೋಗ್ಯ ಸೇವೆಗಳು. |
| ಆ) | ರಾಷ್ಟ್ರೀಯ ಆರೋಗ್ಯ ಅಭಿಯಾನ (National Health Mission) ಅನುಷ್ಠಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾತ್ರಗಳೇನು: (ವಿವರ ನೀಡುವುದು) | • ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಆರ್ಥಿಕ ಸಂಪನ್ಮೂಲವನ್ನು ಪ್ರಸ್ತುತ ಕೇಂದ್ರ ಶೇ.60ರಷ್ಟು ಮತ್ತು ರಾಜ್ಯ ಶೇ.40ರಷ್ಟು ಪ್ರಮಾಣದಲ್ಲಿ ಅನುದಾನ ಹಂಚಿಕೆ ಮಾಡಲಾಗಿದೆ.<br><br>• ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಾಲಯವು ಕಾಲಕಾಲಕ್ಕೆ ರಾಜ್ಯಗಳಿಗೆ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಮಾರ್ಗಸೂಚಿಗಳನ್ನು ನೀಡಲಾಗುವುದು ಹಾಗೂ ಕಾಲಕಾಲಕ್ಕೆ ಆರೋಗ್ಯ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ತರಬೇತಿ, ಮಾಸಿಕ ಸಭೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕೈಗೊಂಡು ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ. |

| | | |
|---|---|---|
| | | • ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಸ್ವೀಕೃತವಾ ಮಾರ್ಗಸೂಚಿಯನ್ವಯ ಜಿಲ್ಲೆಗಳ ಬೇಡಿಕೆಯಂತೆ ಕ್ರಿಯಾ ಯೋಜನೆ ತಯಾರಿಸಿ, ಕಾರ್ಯಕ್ರಮ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು ಹಾಗೂ ಕಾಲಕಾಲಕ್ಕೆ ಆರೋಗ್ಯ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ತರಬೇತಿ, ಮಾಸಿಕ ಸಭೆ ಮತ್ತು ಮೇಲ್ವಿಚಾರಣೆ ಮಾಡಲಾಗುತ್ತಿದೆ. |
| ಇ) | ಕೇಂದ್ರ ಸರ್ಕಾರದಿಂದ ಈ ಅಭಿಯಾನದ ಅಡಿಯಲ್ಲಿ ಜಿಲ್ಲೆಗಳಿಗೆ ದೊರೆಯುವ ವಿವಿಧ ಆರ್ಥಿಕ ನೆರವುಗಳು ಯಾವುವು? (ವಿವರ ನೀಡುವುದು) | ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಜಿಲ್ಲೆಗಳಿಗೆ ದೊರೆಯುವ ಪ್ರಮುಖ ಆರ್ಥಿಕ ನೆರವುಗಳು ಈ ಕೆಳಕಂಡಂತಿದೆ.<br>• ಜನನಿ ಸುರಕ್ಷಾ ಯೋಜನೆ<br>• ಜನನಿ ಶಿಶು ಸುರಕ್ಷಾ ಕಾರ್ಯಕ್ರಮ<br>• ನಿಕ್ಷಯ್ ಪೋಷಣ್ ಯೋಜನೆ<br>• ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ<br>• ವಿವಿಧ ಆರೋಗ್ಯ ಸಂಸ್ಥೆಗಳಿಗೆ ಮುಕ್ತ ಅನುದಾನ<br>• ಕುಟುಂಬ ಕಲ್ಯಾಣ ಯೋಜನೆ<br>**ವಿವರಗಳನ್ನು ಅನುಬಂಧ -1, 2 & 3 ರಲ್ಲಿ ನೀಡಲಾಗಿದೆ.** |

**ಸಂಖ್ಯೆ: ಆಕುಕ 67 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

# ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು

| ಅನುಬಂಧ - 1 | |
|---|---|
| ಕ್ರ ಸಂ | ಕಾರ್ಯಕ್ರಮಗಳು |
| 1 | ತಾಯಿ ಆರೋಗ್ಯ ಕಾರ್ಯಕ್ರಮ |
| 2 | ಕುಟುಂಬ ಕಲ್ಯಾಣ ಕಾರ್ಯಕ್ರಮ |
| 3 | ಮಕ್ಕಳ ಆರೋಗ್ಯ |
| 4 | ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ತಂತ್ರ ವಿಧಾನ |
| 5 | ಲಸಿಕಾ ಕಾರ್ಯಕ್ರಮ |
| 6 | ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ |
| 7 | ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ |
| 8 | ರಾಷ್ಟ್ರೀಯ ಪೌಷ್ಠಿಕ ಆಹಾರ ಕಾರ್ಯಕ್ರಮ |
| 9 | ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನತೆಗಳ ನಿಯಂತ್ರಣ ಕಾರ್ಯಕ್ರಮ |
| 10 | ಸಂಚಾರಿ ಆರೋಗ್ಯ ಘಟಕಗಳು |
| 11 | ಆಶಾ ಕಾರ್ಯಕ್ರಮ |
| 12 | ಸಮಗ್ರ ಆರೋಗ್ಯ ಕಾರ್ಯಕ್ರಮ / ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು |
| 13 | ಆರೋಗ್ಯ ನಿರ್ವಹಣೆಯ ಮಾಹಿತಿ ವ್ಯವಸ್ಥೆ / ಹೆಚ್.ಎಂ.ಐ.ಎಸ್ & ಆರ್.ಸಿ.ಹೆಚ್ ತಂತ್ರಾಂಶ |
| 14 | ಆರೋಗ್ಯಕ್ಕಾಗಿ ಸಮುದಾಯದ ಸಹಭಾಗಿತ್ವ |
| 15 | ಮುಕ್ತನಿಧಿ |
| 16 | ಇ.ಎಂ.ಆರ್.ಐ–108 ಕಾರ್ಯಕ್ರಮ (ರಾಷ್ಟ್ರೀಯ ಆಂಬುಲೆನ್ಸ್ ಸೇವೆಗಳು) |
| 17 | ಇ-ಆಸ್ಪತ್ರೆ/ ಟೆಲಿ ಮೆಡಿಸಿನ್ ಕಾರ್ಯಕ್ರಮ |
| 18 | ಆರೋಗ್ಯ ಸಹಾಯವಾಣಿ – 104 ಕಾರ್ಯಕ್ರಮ |
| 19 | ಗುಣಮಟ್ಟ ಖಾತ್ರಿ ಕಾರ್ಯಕ್ರಮ, ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ |
| 20 | ರಾಷ್ಟ್ರೀಯ ಉಚಿತ ರೋಗಪತ್ತೆ ಸೇವೆಗಳು / ರಾಷ್ಟ್ರೀಯ ಉಚಿತ ಔಷಧಿಗಳು |
| 21 | ವಿಕಿರಣ ಸುರಕ್ಷತಾ ಕಾರ್ಯಕ್ರಮ |
| 22 | ಐ.ಇ.ಸಿ-ಬಿ.ಸಿ.ಸಿ ಕಾರ್ಯಕ್ರಮ |
| 23 | ರಾಜ್ಯ ರಕ್ತ ಕಣ ವಿಭಾಗ / ರಕ್ತ ಸಂಗ್ರಹಣಾ ಘಟಕ |
| 24 | ರಕ್ತ ಸುರಕ್ಷತೆ ಮತ್ತು ರಕ್ತ ಸಂಗ್ರಹಣಾ ವಿಭಾಗ |
| 25 | ವೈದ್ಯಕೀಯ ಸಲಕರಣಾ ನಿರ್ವಹಣಾ ವಿಭಾಗ |
| 26 | ಆಯುಷ್ ಕಾರ್ಯಕ್ರಮ |
| 27 | ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ |
| 28 | ಸಮಗ್ರ ರೋಗಗಳ ಕಣ್ಗಾವಲು ಯೋಜನೆ |
| 29 | ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ |
| 30 | ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ |
| 31 | ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ |
| 32 | ರಾಷ್ಟ್ರೀಯ ವೈರಲ್ ಹೆಪಟೈಟಿಸ್ ನಿಯಂತ್ರಣ ಕಾರ್ಯಕ್ರಮ |
| 33 | ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮ |
| 34 | ಲೆಪ್ಟೋಸ್ಪೈರೋಸಿಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ |

| | |
|---|---|
| 35 | ಕ್ಯಾಸನೂರು ಮಂಗನ ಖಾಯಿಲೆ |
| 36 | ರಾಷ್ಟ್ರೀಯ ಕ್ಯಾನ್ಸರ್, ಮಧುಮೇಹ, ಹೃದಯ ರಕ್ತನಾಳಗಳ ರೋಗ ಮತ್ತು ಪಾರ್ಶ್ವವಾಯು ತಡೆ ಮತ್ತು ನಿಯಂತ್ರಣ ಕಾರ್ಯಕ್ರಮ |
| 37 | ರಾಷ್ಟ್ರೀಯ ವಯೋವೃದ್ಧರ ಆರೋಗ್ಯ ಆರೈಕೆ ಕಾರ್ಯಕ್ರಮ |
| 38 | ರಾಷ್ಟ್ರೀಯ ಉಪ ಶಾಮಕ ಆರೈಕೆ ಕಾರ್ಯಕ್ರಮ |
| 39 | ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ |
| 40 | ಪ್ರಧಾನಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಮತ್ತು ಐ.ಸಿ.ಯು ಕಾರ್ಯಕ್ರಮ |
| 41 | ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ |
| 42 | ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಮಾಂದ್ಯತೆ ನಿಯಂತ್ರಣಾ ಕಾರ್ಯಕ್ರಮ |
| 43 | ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ |
| 44 | ರಾಷ್ಟ್ರೀಯ ಫ್ಲೂರೋಸಿಸ್ ನಿಯಂತ್ರಣ ಕಾರ್ಯಕ್ರಮ |
| 45 | ರಾಷ್ಟ್ರೀಯ ಬಾಯಿಯ ಆರೋಗ್ಯ ಕಾರ್ಯಕ್ರಮ |
| 46 | ಹವಾಮಾನ ಬದಲಾವಣೆ ಮತ್ತು ಮಾನವ ಆರೋಗ್ಯದ ಕಾರ್ಯಕ್ರಮ |

**State Programme Manager**
National Health Mission, Karnataka

# ಅನುಬಂಧ-2

ಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2022-23 ನೇ ಸಾಲಿನಲ್ಲಿ ಅನುಮೋದನೆಯಾಗಿರುವ ಅನುದಾನವು ಜಿಲ್ಲಾವಾರು ಹಂಚಿಕೆಯಾಗಿರುವ ವಿವರ.

| ಸಂ | ಜಿಲ್ಲೆಗಳ ಹೆಸರು | ಹಂಚಿಕೆಯಾದ ಅನುದಾನ (ಕೇಂದ್ರ ಸರ್ಕಾರ 60%) (ಲಕ್ಷಗಳಲ್ಲಿ) | ಹಂಚಿಕೆಯಾದ ಅನುದಾನ (ರಾಜ್ಯ ಸರ್ಕಾರ 40%) (ಲಕ್ಷಗಳಲ್ಲಿ) | ಒಟ್ಟು ಹಂಚಿಕೆಯಾದ ಅನುದಾನ (ಲಕ್ಷಗಳಲ್ಲಿ) |
|---|---|---|---|---|
| 1 | ಬಾಗಲಕೋಟೆ | 4056.69 | 2704.46 | 6761.14 |
| 2 | ಬಳ್ಳಾರಿ | 3976.83 | 2651.22 | 6628.05 |
| 3 | ಬೆಳಗಾವಿ | 10920.71 | 7280.48 | 18201.19 |
| 4 | ಬೆಂಗಳೂರು ಗ್ರಾಮಾಂತರ | 2105.97 | 1403.98 | 3509.95 |
| 5 | ಬೆಂಗಳೂರು ನಗರ | 4599.72 | 3066.48 | 7666.20 |
| 6 | ಬೀದರ್ | 2938.17 | 1958.78 | 4896.96 |
| 7 | ಚಾಮರಾಜನಗರ | 2022.78 | 1348.52 | 3371.30 |
| 8 | ಚಿಕ್ಕಬಳ್ಳಾಪುರ | 3810.99 | 2540.66 | 6351.65 |
| 9 | ಚಿಕ್ಕಮಂಗಳೂರು | 3322.69 | 2215.12 | 5537.81 |
| 0 | ಚಿತ್ರದುರ್ಗ | 3807.54 | 2538.36 | 6345.91 |
| 1 | ದಕ್ಷಿಣ ಕನ್ನಡ | 4294.37 | 2862.91 | 7157.28 |
| 2 | ದಾವಣಗೆರೆ | 4562.85 | 3041.90 | 7604.74 |
| 3 | ಧಾರವಾಡ | 3696.01 | 2464.00 | 6160.01 |
| 4 | ಗದಗ | 2598.60 | 1732.40 | 4330.99 |
| 5 | ಹಾಸನ | 4262.75 | 2841.83 | 7104.58 |
| 6 | ಹಾವೇರಿ | 2715.98 | 1810.65 | 4526.63 |
| 7 | ಕಲಬುರಗಿ | 5892.21 | 3928.14 | 9820.36 |
| 8 | ಕೊಡಗು | 2015.76 | 1343.84 | 3359.60 |
| 9 | ಕೋಲಾರ | 2811.20 | 1874.14 | 4685.34 |
| 0 | ಕೊಪ್ಪಳ | 3501.09 | 2334.06 | 5835.15 |
| 1 | ಮಂಡ್ಯ | 4190.44 | 2793.63 | 6984.07 |
| 2 | ಮೈಸೂರು | 5916.26 | 3944.18 | 9860.44 |
| 3 | ರಾಯಚೂರು | 4894.52 | 3263.01 | 8157.53 |
| 4 | ರಾಮನಗರ | 2487.13 | 1658.09 | 4145.22 |
| 5 | ಶಿವಮೊಗ್ಗ | 4107.99 | 2738.66 | 6846.65 |
| 6 | ತುಮಕೂರು | 7169.15 | 4779.44 | 11948.59 |
| 7 | ಉಡುಪಿ | 2904.46 | 1936.30 | 4840.76 |
| 8 | ಉತ್ತರ ಕನ್ನಡ | 3849.91 | 2566.61 | 6416.52 |
| 9 | ವಿಜಯಪುರ | 4527.14 | 3018.09 | 7545.23 |
| 0 | ವಿಜಯನಗರ | 1826.50 | 1217.67 | 3044.17 |
| 1 | ಯಾದಗಿರಿ | 2585.15 | 1723.43 | 4308.59 |
| 2 | ಬಿ.ಬಿ.ಎಂ.ಪಿ | 4501.53 | 3001.02 | 7502.56 |
| | **ಒಟ್ಟು ಅನುದಾನ** | **126873.11** | **84582.07** | **211455.18** |

**State Programme Manager**
National Health Mission, Karnataka

# ಅನುಬಂಧ -3

## ಕೇಂದ್ರ ಸರ್ಕಾರದಿಂದ ಈ ಅಭಿಯಾನದ ಅಡಿಯಲ್ಲಿ ಜಿಲ್ಲೆಗಳಿಗೆ ದೊರೆಯುವ ವಿವಿಧ ಆರ್ಥಿಕ ನೆರವುಗಳು.

**1. ಜನನಿ ಸುರಕ್ಷಾ ಯೋಜನೆ:**

ಬಡತನ ರೇಖೆಗಿಂತ (BPL) ಕೆಳಗಿರುವ ಗರ್ಭಿಣಿ ಮಹಿಳೆಯರಿಗೆ
ಗ್ರಾಮೀಣ ಭಾಗದ ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆಯಾದರೆ ರೂ.700/- ಗಳನ್ನು, (Rural).
ನಗರ ಪ್ರದೇಶದಲ್ಲಿ ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆಯಾದರೆ ರೂ.600/-ಗಳನ್ನು ನೀಡಲಾಗುತ್ತದೆ.(Urban).

**2. ಜನನಿ ಶಿಶು ಸುರಕ್ಷಾ ಕಾರ್ಯಕ್ರಮ:**

ಈ ಕಾರ್ಯಕ್ರಮದಡಿಯಲ್ಲಿ ಗರ್ಭಿಣಿ ಮತ್ತು ಶಿಶುವಿಗೆ ಔಷಧಿ, ರೋಗ ಪತ್ತೆ, ಆಹಾರ ಸೌಲಭ್ಯ ಮತ್ತು ಸಾರಿಗೆ ವ್ಯವಸ್ಥೆಗೆ ತಗಲುವ ವೆಚ್ಚಕ್ಕೆ ಆರ್ಥಿಕ ನೆರವು ನೀಡಲಾಗುವುದು.

**3. ನಿಕ್ಷಯ್ ಪೋಷಣ್ ಯೋಜನೆ:**

ಅಧಿಸೂಚಿತ ಕ್ಷಯ ರೋಗಿಗಳಿಗೆ ಭಾರತ ಸರ್ಕಾರದಿಂದ ಪೌಷ್ಠಿಕಾಂಶಯುಕ್ತ ಆಹಾರ ಸೇವನೆಗೆ ಉತ್ತೇಜಿಸಲು ಚಿಕಿತ್ಸಾವಧಿಯಲ್ಲಿ ಪ್ರತಿ ತಿಂಗಳಿಗೆ ಪ್ರತಿ ರೋಗಿಗೆ ರೂ.500/- ಗಳ ಆರ್ಥಿಕ ನೀಡುವುದು.

**4. ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ:**

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಒಟ್ಟು 38 ಚಟುವಟಿಕೆಗಳಿಗೆ ಕಾರ್ಯನಿರ್ವಹಣಾ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

**5. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಮುಕ್ತ ಅನುದಾನ:**

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಕೆಳಕಂಡಂತೆ ಮುಕ್ತ ಅನುದಾನವನ್ನು ನೀಡಲಾಗುತ್ತದೆ.

| ಕ್ರ. ಸಂ | ಆರೋಗ್ಯ ಸಂಸ್ಥೆ | ವಾರ್ಷಿಕ ಮುಕ್ತ ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ ) |
|---|---|---|
| 1. | ಜಿಲ್ಲಾ ಆಸ್ಪತ್ರೆ | 10.00 |
| 2. | ತಾಲ್ಲೂಕು ಆಸ್ಪತ್ರೆ | 5.00 |
| 3. | ಸಮುದಾಯ ಆರೋಗ್ಯ ಕೇಂದ್ರ | 5.00 |
| 4. | ಪ್ರಾಥಮಿಕ ಆರೋಗ್ಯ ಕೇಂದ್ರ | 1.75 |

**6. ಕುಟುಂಬ ಕಲ್ಯಾಣ ಯೋಜನೆ:**

ಕುಟುಂಬ ಕಲ್ಯಾಣ ಯೋಜನೆಯಡಿ ಫಲಾನುಬವಿಗಳಿಗೆ ಈ ಕೆಳಕಂಡಂತೆ ಆರ್ಥಿಕ ನೆರವು ನೀಡಲಾಗುವುದು.

- ಸಂತಾನ ಹರಣ ಶಸ್ತ್ರಚಿಕಿತ್ಸೆಗೆ ಮಹಿಳೆಯರಿಗೆ ರೂ.600/- (BPL), ರೂ.250/- (APL)
- ಸಂತಾನ ಹರಣ ಶಸ್ತ್ರಚಿಕಿತ್ಸೆಗೆ ಪುರುಷರಿಗೆ ರೂ.1100/-
- PPIUCD /PAIUCD ರೂ.300/-
- ಇಂಜೆಕ್ಷನ್ ಅಂತರ ರೂ.100/-

State Programme Manager
National Health Mission, Karnataka